**ಸಮಗ್ರ ಶಿಕ್ಷಣ ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್.ವೃ ತ್ತ,ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸಶಿಕ/ಆಚ/ಸ್ವಪ/01/2023

ದಿನಾಂಕ: 15.05.2023

**ಸುತ್ತೋಲೆ**

ವಿಷಯ: ದಿನಾಂಕ: 01.09.2023 ರಿಂದ ದಿನಾಂಕ: 15.09.2023 ರವರೆಗೆ ಶಾಲಾ/ಕಾಲೇಜುಗಳ ಹಂತದಲ್ಲಿ "ಸ್ವಚ್ಛತಾ ಪಖ್ವಾಡಾ"ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: ಮಾನ್ಯ ಜಂಟಿ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ, ನವದೆಹಲಿರವರ ಪತ್ರ ಸಂಖ್ಯೆ D.O.No.F,28-3/2023-IS-10 ಮತ್ತು ದಿನಾಂಕ: 03.05.2023

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2016ನೇ ಸಾಲಿನಿಂದ ರಾಷ್ಟ್ರದ ಎಲ್ಲಾ ಶಾಲಾ/ಕಾಲೇಜುಗಳಲ್ಲಿ ಸ್ವಚ್ಛತಾ ಪಖ್ವಾಡ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸಹಕಾರದಿಂದ ಈ ಕಾರ್ಯಕ್ರಮವು ಯಶಸ್ವಿಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಶಿಕ್ಷಣ ಇಲಾಖೆಗೆ ದಿನಾಂಕ: 01.09.2023 ರಿಂದ ದಿನಾಂಕ:15.09.2023 ರವರೆಗೆ ಕೇಂದ್ರ ಸರ್ಕಾರದ ಸಚಿವ ಸಂಪುಟ ಸಚಿವಾಲಯ ಹಾಗೂ ಜಲ ಶಕ್ತಿ ಸಚಿವಾಲಯ ಭಾರತ ಸರ್ಕಾರ ರವರು ಸದರಿ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಶಿಕ್ಷಕರು, ಸಮುದಾಯದ ಭಾಗೀದಾರರೊಂದಿಗೆ ಪರಿಣಾಮಕಾರಿಯಾಗಿ ಶಾಲಾ ಕಾಲೇಜುಗಳ ಹಂತದಲ್ಲಿ ಅನುಷ್ಠಾನಗೊಳಿಸಿ ಶಾಲಾ ಮಕ್ಕಳಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿ, ಪ್ರತಿಯೊಂದು ಮಗು ವೈಯಕ್ತಿಕವಾಗಿ ಶಾಲೆ, ಸಮುದಾಯ ಹಾಗೂ ಮನೆಯ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಪ್ರೇರೇಪಿಸುವುದು. ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಬಗ್ಗೆ ಫೋಟೋಗಳು ಹಾಗೂ ವೀಡಿಯೋಗಳನ್ನು Google Tracker/Drive ನಲ್ಲಿ ಅಪ್ಲೋಡ್ ಮಾಡುವುದು.

**"ಸ್ವಚ್ಛತಾ ಪಖ್ವಾಡಾ" ಕಾರ್ಯಕ್ರಮದಡಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು.**

1. **ದಿನಾಂಕ : 01.09.2023-ಶುಕ್ರವಾರ "ಸ್ವಚ್ಛತಾ ಶಪಥ ದಿನ"(Swachhata Shapath Day)**

ಶಾಲೆಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಯಲ್ಲಿ ವೈಯಕ್ತಿಕವಾಗಿ ತನ್ನ ಶಾಲೆ, ಸಮುದಾಯ ಹಾಗೂ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹೇಳಿಕೆಯನ್ನು ನೀಡಿ ಶಪಥ ಮಾಡುವುದು. ಸ್ವಚ್ಛತಾ ಪ್ರಚಾರ ಹಾಗೂ ಜಾಗೃತಿಗೆ ಸಾಮಾಜಿಕ ಮಾಧ್ಯಮಗಳ ಬಳಕೆ ಮಾಡಬಹುದು. ಶಪಥ ಸ್ವೀಕರಿಸಿದ ಶಿಕ್ಷಕ, ವಿದ್ಯಾರ್ಥಿಗಳ ಸಂಖ್ಯೆ, ಫೋಟೋ, ವೀಡಿಯೋಗಳು, ಸ್ವಚ್ಛತಾ ಜಾಗೃತಿ ಸಂದೇಶ ಹಾಗೂ ಎಲೆಕ್ಟ್ರಾನಿಕ್ ಬ್ಯಾನರ್‌ಗಳನ್ನು ವೆಬ್ ಸೈಟ್ ನಲ್ಲಿ ಅಪ್ಲೋಡ್ ಮಾಡುವುದು.

2. **ದಿನಾಂಕ : 02.09.2023-03.09.2023 ಶನಿವಾರ ಹಾಗೂ ಭಾನುವಾರ "ಸ್ವಚ್ಛತಾ ಜಾಗೃತಿ ದಿನಗಳು"** (Swachhata Awareness Days)

- ಸ್ವಚ್ಛತೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲು SMCs/ SMDCs/ PTAಗಳ ಸಭೆಯನ್ನು ನಡೆಸುವುದು.
- ವಿದ್ಯಾರ್ಥಿಗಳಲ್ಲಿ ನೈರ್ಮಲ್ಯ ಮತ್ತು ಊಟಕ್ಕೆ ಮೊದಲು ಹಾಗೂ ಶೌಚಾಲಯ ಬಳಸಿದ ನಂತರ ಸೋಪಿನಿಂದ ಕೈ ತೊಳೆಯುವುದು, ಮಾಸ್ಕ್ ಬಳಕೆ ಮತ್ತು ಸಾಮಾಜಿಕ ಅಂತರದ ಪ್ರಾಮುಖ್ಯತೆಯ ಬಗ್ಗೆ ಮಕ್ಕಳಿಗೆ ತಿಳಿಸುವುದು.
- ಶಾಲೆ ಮತ್ತು ಮನೆಯಲ್ಲಿ ನೈರ್ಮಲ್ಯ ಕಾಪಾಡುವಂತೆ ಪೋಷಕರು ಮತ್ತು ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಹಾಗೂ ಪ್ರೇರೇಪಿಸುವುದು.
- ಶಿಕ್ಷಕರು ಶಾಲೆ/ಸಂಸ್ಥೆಯಲ್ಲಿ ನೈರ್ಮಲ್ಯ ಸೌಲಭ್ಯಗಳನ್ನು ಪರಿಶೀಲಿಸಿ, ಮೌಲ್ಯಮಾಪನ ಮಾಡಿ ಸೌಲಭ್ಯಗಳ ನಿರ್ವಹಣೆಗಾಗಿ ಪ್ರಸ್ತಾವನೆ/ಯೋಜನೆಯನ್ನು ಮಾಡುವುದು.
- ವಾಶ್ ಸೌಲಭ್ಯಗಳ ಅಳವಡಿಕೆ (ಕೈ ತೊಳೆಯುವ ಸೌಲಭ್ಯ, ದೈನಂದಿನ ಶುಚಿಗೊಳಿಸುವಿಕೆ ಮತ್ತು ಶೌಚಾಲಯಕ್ಕೆ ನೀರಿನ ಸೌಲಭ್ಯ ಬಳಕೆ, ತ್ಯಾಜ್ಯ ನಿರ್ವಹಣೆ, O&M ಇತ್ಯಾದಿ)ಗಳ ಬಗ್ಗೆ ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಸಮರ್ಪಕ ನಿರ್ವಹಣೆ ಮಾಡುವುದು.

- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಸ್ವಚ್ಛ ಶೌಚಾಲಯಗಳ ವ್ಯವಸ್ಥೆ ಹಾಗೂ ಸುರಕ್ಷಿತ ನೀರು, ಸೋಂಕು ನಿವಾರಕಗಳು, ಶುಚಿಗೊಳಿಸುವ ಸಿಬ್ಬಂದಿ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವುದು.

- ಜಲ ಜೀವನ್ -ಮಿಷನ್ ಅಡಿ ಮಳೆ ನೀರನ್ನು ಸಂಗ್ರಹಿಸುವುದು ಹಾಗೂ ಪೈಪ್ ಗಳ ಮೂಲಕ ನೀರು ಸರಬರಾಜು ಮಾಡುವುದು.

- MDM ಅಡುಗೆಮನೆ, ತರಗತಿ ಕೊಠಡಿಗಳು, ಫ್ಯಾನ್‌ಗಳು, ಬಾಗಿಲುಗಳು, ಕಿಟಕಿಗಳನ್ನು ಶುಚಿಗೊಳಿಸುವುದು. ಶಾಲೆಯ ಆವರಣದಲ್ಲಿರುವ ಪೊದೆಗಳನ್ನು ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳುವುದು.

- ಸ್ಥಳೀಯರ ಪ್ರತಿನಿಧಿಗಳ ಭಾಗವಹಿಸುವಿಕೆಯೊಂದಿಗೆ SMCs/PTAಗಳನ್ನು ನಡೆಸುವುದು ಹಾಗೂ ಸ್ವಚ್ಛತಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.

- ಹಳೆಯ ಫೈಲ್‌ಗಳು, ಮುರಿದ ಪೀಠೋಪಕರಣಗಳು, ಬಳಸಲಾಗದ ಉಪಕರಣಗಳು, ನಿಷ್ಕ್ರಿಯ ವಾಹನಗಳು ಮುಂತಾದ ಎಲ್ಲಾ ರೀತಿಯ ತ್ಯಾಜ್ಯ ವಸ್ತುಗಳು ಇತ್ಯಾದಿಗಳನ್ನು ಪರಿಶೀಲಿಸಿ ನಿಯಮಾನುಸಾರ ಶಾಲೆಗಳು/ಸಂಸ್ಥೆಗಳ ಆವರಣದಿಂದ ಸಂಪೂರ್ಣವಾಗಿ ವಿಲೇವಾರಿ ಮಾಡುವುದು.

3. **ದಿನಾಂಕ : 04.09.2023-05.09.2023 ಸೋಮವಾರ ಹಾಗೂ ಮಂಗಳವಾರ ಸಮುದಾಯ ಭಾಗವಹಿಸುವಿಕೆ ದಿನಗಳು (Community Outreach Days)**

- ಎಲ್ಲಾ ಶಿಕ್ಷಕರು ಸ್ಥಳೀಯ ಸಮುದಾಯಗಳಿಗೆ ಸ್ವಚ್ಛತಾ ಕುರಿತು ಜಾಗೃತಿ ಮೂಡಿಸಲು ಹತ್ತಿರದ ಹಳ್ಳಿಗಳಿಗೆ ಭೇಟಿ ನೀಡುವುದು.

- ತ್ಯಾಜ್ಯ ನಿರ್ವಹಣಾ ಕಾರ್ಯವನ್ನು ಕೈಗೊಳ್ಳಲು ವಿಶೇಷ ಗಮನಹರಿಸುವುದು.

- ಜಲ ಸಂಪನ್ಮೂಲಗಳನ್ನು ವ್ಯರ್ಥ ಮಾಡುವುದನ್ನು ನಿಲ್ಲಿಸಲು, ನೀರಿನ ಸಂರಕ್ಷಣೆ ಹಾಗೂ ಜಲ ಶಕ್ತಿ ಅಭಿಯಾನದ ಬಗ್ಗೆ ಸ್ಥಳೀಯ ಸಮುದಾಯಕ್ಕೆ ಅರಿವು ಮೂಡಿಸುವುದು.

- ಪ್ರತಿ ಶಾಲೆಯಲ್ಲಿ ಶಿಕ್ಷಕರ ದಿನವನ್ನು ಸೂಕ್ತವಾಗಿ ಆಚರಿಸುವುದು.

- ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸ್ಥಳೀಯ ಪ್ರತಿನಿಧಿಗಳೊಂದಿಗೆ ಸಹಭಾಗಿತ್ವದಲ್ಲಿ ಸ್ವಚ್ಛತೆ ಕುರಿತು ಪ್ರಚಾರ ಮಾಡುವುದು.

- ಶಿಕ್ಷಕರು ಸ್ಥಳೀಯ ಪ್ರದೇಶಗಳಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತಾ ಪಖ್ವಾಡದ ಥೀಮ್ ಬಗ್ಗೆ ಅರಿವು ಮೂಡಿಸುವ ಸಮುದಾಯದ ಚಟುವಟಿಕೆಗಳಲ್ಲಿ ಭಾಗವಹಿಸುವುದು.

4. **ದಿನಾಂಕ : 06.09.2023 (ಬುಧವಾರ) ಹಸಿರು ಶಾಲಾ ಚಾಲನೆ (Green School Drive Day)**

- ವಿದ್ಯಾರ್ಥಿಗಳಿಂದ ನೀರಿನ ಸಂರಕ್ಷಣೆ, ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ನಿರ್ಮೂಲನೆ ಹಾಗೂ ಇತರೆ ಪರಿಸರ ಸಂರಕ್ಷಣೆ ವಿಷಯಗಳ ಕುರಿತು ಕಾಲ್ಪನಿಕ ಘೋಷಣೆಗಳು, ಪೋಸ್ಟರ್‌ಗಳು ಮತ್ತು ಕರಪತ್ರಗಳನ್ನು ಸಿದ್ಧಪಡಿಸಿ ಶಾಲಾ ಪ್ರದರ್ಶನಗಳಲ್ಲಿ ಮತ್ತು ಹಳ್ಳಿ/ಪಟ್ಟಣ ಗೋಡೆಗಳು/ಶಾಲಾ ಆವರಣದಲ್ಲಿ ಪ್ರದರ್ಶಿಸುವುದು.

- ವಿದ್ಯಾರ್ಥಿಗಳಿಗೆ ನೀರಿನ ಸಂರಕ್ಷಣೆಯ ಜಾಗೃತಿ ಮೂಡಿಸಲು ನೀರಿನ ಕೊರತೆಯ ಪರಿಣಾಮ, ನೈಸರ್ಗಿಕ ಮೂಲಗಳ ರಕ್ಷಣೆ ಬಗ್ಗೆ ಶಿಕ್ಷಣ ನೀಡಿ ಪ್ರತಿ ವಿದ್ಯಾರ್ಥಿಯು ದಿನಕ್ಕೆ ಕನಿಷ್ಠ ಒಂದು ಲೀಟರ್ ನೀರನ್ನು ಉಳಿಸಲು ಕಲಿಸುವುದು ಹಾಗೂ ಮನೆ ಮತ್ತು ಶಾಲೆಯಲ್ಲಿ ಪ್ರೋತ್ಸಾಹಿಸಲು ನೀರಿನ ವಿವೇಚನಾಯುಕ್ತ ಬಳಕೆಗೆ ಪ್ರೋತ್ಸಾಹಿಸುವುದು.

5. **ದಿನಾಂಕ : 07.09.2023 & 08.09.2023 (ಗುರುವಾರ ಮತ್ತು ಶುಕ್ರವಾರ) ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸುವ ದಿನಗಳು (Swachhata Participation Days)**

- ಜಿಲ್ಲೆಗಳು/ಬ್ಲಾಕ್‌ಗಳು/ಕ್ಲಸ್ಟರ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸ್ವಚ್ಛತೆ ಮತ್ತು ಉತ್ತಮ ನಿರ್ವಹಣೆಗಾಗಿ ಸ್ಪರ್ಧೆಗಳನ್ನು ನಡೆಸುವುದು.

- ಶಾಲೆಯ ಆವರಣ ಮತ್ತು ಶೌಚಾಲಯ ಸ್ವಚ್ಛತೆ ಕುರಿತು ಪ್ರಬಂಧ, ಘೋಷ ವಾಕ್ಯಗಳ ರಚನೆ, ಭಾಷಣ, ರಸಪ್ರಶ್ನೆ, ಚರ್ಚೆಗಳು, ಚಿತ್ರಕಲೆ, ನಾಟಕ, ಕವಿತೆ ಬರವಣಿಗೆ, ಮಾದರಿ ತಯಾರಿಕೆ ಇತ್ಯಾದಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.

6. ದಿನಾಂಕ : 09.09.2023 & 10.09.2023 (ಶನಿವಾರ ಮತ್ತು ಭಾನುವಾರ)
   ಕೈತೊಳೆಯುವ ದಿನಗಳು (Hand Wash Days)

- ವಿದ್ಯಾರ್ಥಿಗಳಿಗೆ ದೈನಂದಿನ ಜೀವನದಲ್ಲಿ ಸರಿಯಾದ ಕೈ ತೊಳೆಯುವ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸುವುದು.
- ಮಕ್ಕಳಿಗೆ ಊಟಕ್ಕೆ ಮೊದಲು ಹಾಗೂ ಶೌಚಾಲಯ ಬಳಸಿದ ನಂತರ ಸೋಪಿನಿಂದ ಕೈ ತೊಳೆಯುವ ವಿಧಾನ/ಹೆಜ್ಜೆಗಳು/ಕ್ಷಣಗಳು, ಸಮಯಗಳನ್ನು ಕಲಿಸುವುದು.
- ದಿವ್ಯಾಂಗ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯಗಳಿಗೆ ತಡೆ ಮುಕ್ತ ಪ್ರವೇಶ ಪರಿಶೀಲಿಸುವುದು ಮತ್ತು ಖಚಿತಪಡಿಸಿಕೊಳ್ಳುವುದು.
- ನೀರಿನ ಅಪವ್ಯಯ ಮಾಡದಂತೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು.
- ಕೈ ತೊಳೆಯುವ ಘಟಕದಿಂದ ಬರುವ ನೀರನ್ನು ಶಾಲಾ ಉದ್ಯಾನಗಳಿಗೆ ಹರಿಸುವುದು.
- ಮಕ್ಕಳಿಗೆ ನೀರಿನಿಂದ ಹರಡುವ ರೋಗಗಳ ಬಗ್ಗೆ ಅರಿವು ಮೂಡಿಸುವುದು.

7. ದಿನಾಂಕ : 11.09.2023-ಸೋಮವಾರ
   (ವೈಯಕ್ತಿಕ ನೈರ್ಮಲ್ಯ ದಿನ) Personal Hygiene Day

- ಆಡಿಯೋ ದೃಶ್ಯದ ಮೂಲಕ ವಿದ್ಯಾರ್ಥಿಗಳು/ಉದ್ಯೋಗಿಗಳು ಮತ್ತು ಇತರರನ್ನು ಸ್ವಚ್ಛತೆ ಕಾಪಾಡುವ ಕುರಿತು ಪ್ರೇರೇಪಿಸಲು ಕಾರ್ಯಕ್ರಮವನ್ನು ಕೈಗೊಳ್ಳುವುದು.
- ವಿದ್ಯಾರ್ಥಿಗಳು ಉಗುರುಗಳನ್ನು ಕತ್ತರಿಸುವ ಮತ್ತು ಸ್ವಚ್ಛವಾಗಿಟ್ಟು ಕೊಳ್ಳುವ ಸರಿಯಾದ ವಿಧಾನ, ಶುದ್ಧ ನೀರಿನಿಂದ ದೈನಂದಿನ ಸ್ನಾನ, ಸ್ವಚ್ಛವಾದ ಬಟ್ಟೆಗಳನ್ನು ಧರಿಸುವುದು, ತೆರೆದ ಸ್ಥಳದಲ್ಲಿ ಉಗುಳುವುದು, ಶೂಗಳು / ಚಪ್ಪಲಿಗಳನ್ನು ಧರಿಸುವುದು, ಇತರರೊಂದಿಗೆ ವೈಯಕ್ತಿಕ ವಸ್ತುಗಳನ್ನು ಹಂಚಿಕೊಳ್ಳದಿರುವ ಬಗ್ಗೆ ಮಾಹಿತಿ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರನ್ನು ಬಳಸುವ ನೈರ್ಮಲ್ಯ ವಿಧಾನವನ್ನು ಕಲಿಸುವುದು.
- ದಿನಕ್ಕೆ ಎರಡು ಬಾರಿ ಹಲ್ಲುಜ್ಜುವ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಹಾಗೂ ಅಭ್ಯಾಸ ಮಾಡಿಸುವುದು.

8. ದಿನಾಂಕ : 12.09.2023 ಮಂಗಳವಾರ
   ಸ್ವಚ್ಛತಾ ಶಾಲಾ ಪ್ರದರ್ಶನ ದಿನ (Swachhata School Exhibition Day)

- ಸ್ವಚ್ಛತೆ ಕುರಿತು ವಿದ್ಯಾರ್ಥಿಗಳಿಂದ ಪ್ರಬಂಧ/ ಘೋಷಣೆ/ ಕವಿತೆ ಬರವಣಿಗೆ, ಚಿತ್ರಕಲೆ, ಭಾಷಣ, ರಸಪ್ರಶ್ನೆ, ಮಾದರಿಗಳ ತಯಾರಿಕೆ, ಛಾಯಾಚಿತ್ರಗಳು, ವ್ಯಂಗ್ಯಚಿತ್ರಗಳು ಇತ್ಯಾದಿಗಳನ್ನು ರಚಿಸಿ ಶಾಲೆ/ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸುವುದು.
- ಸ್ಥಳೀಯ ಮರುಬಳಕೆಯ-ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಮನೆಯಲ್ಲಿ ತ್ಯಾಜ್ಯವನ್ನು ಸಂಗ್ರಹಿಸಲು ಸಂಸ್ಕೃತಿಯನ್ನು ಉತ್ತೇಜಿಸುವ ಸ್ಥಳೀಯ ಕೌಶಲ್ಯಗಳನ್ನು ಬಳಸಿಕೊಂಡು ಕಲಾತ್ಮಕ ಕಸದ ತೊಟ್ಟಿಗಳನ್ನು ತಯಾರಿಸುವುದು.

9. ದಿನಾಂಕ : 13.09.2023 ಮತ್ತು 14.09.2023 ಬುಧವಾರ ಮತು ಗುರುವಾರ
   ಸ್ವಚ್ಛತಾ ಕ್ರಿಯಾ ಯೋಜನೆ ದಿನಗಳು (Swachhata Action Plan Days)

- SMC/SDMC ರವರು ಸ್ವಚ್ಛತೆ ಕುರಿತು ವಿದ್ಯಾರ್ಥಿಗಳು, ಪೋಷಕರು ಮತ್ತು ಸ್ಥಳೀಯ ಜನರಲ್ಲಿ ಅರಿವು ಮೂಡಿಸಲು ಶಾಲೆಯ ಸ್ವಚ್ಛತಾ ಕ್ರಿಯಾ ಯೋಜನೆ ತಯಾರಿಸುವುದು.
- ಶಾಲೆಯಲ್ಲಿ ಸ್ವಚ್ಛತಾ ಪಖ್ವಾಡ ಚಟುವಟಿಕೆಗಳ ಬಗ್ಗೆ ವಿಶೇಷವಾಗಿ ಚರ್ಚಿಸಲು ಬಾಲ ಸಂಸದ್/ಶಾಲಾ ಕ್ಯಾಬಿನೆಟ್‌ನ ಸಣ್ಣ ಗುಂಪು ಸಭೆಯನ್ನು ಹಮ್ಮಿಕೊಳ್ಳುವುದು.

- ಸಮುದಾಯದ ಸದಸ್ಯರು ಮತ್ತು ವಿದ್ಯಾರ್ಥಿಗಳು ಸ್ವಚ್ಛತಾ ಪಖ್ವಾಡಾ ಅಡಿಯಲ್ಲಿ ಹಮ್ಮಿಕೊಳ್ಳಬಹುದಾದ ನವೀನ ಚಟುವಟಿಕೆಗಳನ್ನು ತಮ್ಮ ಸಲಹೆ ರೂಪದಲ್ಲಿ ನೀಡುವುದು.

10. ದಿನಾಂಕ : 15.09.2023 ಶುಕ್ರವಾರ ಬಹುಮಾನ ವಿತರಣಾ ದಿನ (Prize Distribution Day)

- ಸ್ವಚ್ಛತೆಯನ್ನು ಉತ್ತೇಜಿಸಲು ಹಮ್ಮಿಕೊಳ್ಳಲಾದ ಚಿತ್ರಕಲೆ, ಪ್ರಬಂಧ, ಚರ್ಚೆ, ರಸಪ್ರಶ್ನೆ, ಸ್ಲೋಗನ್, ಕ್ರಾಫ್ಟಿಂಗ್ ಹಾಗೂ ಮಾದರಿ ತಯಾರಿಕೆ ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳು, ಶಿಕ್ಷಕರು ಮತ್ತು ಪೋಷಕರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವುದು.

- ಎಲ್ಲಾ ಶಾಲೆಗಳು/ಶೈಕ್ಷಣಿಕ ಸಂಸ್ಥೆಗಳು ಪಖ್ವಾಡದ ಸಮಯದಲ್ಲಿ ಉತ್ತಮವಾಗಿ ಹಮ್ಮಿಕೊಂಡ ಚಟುವಟಿಕೆಗಳ ಮಾಹಿತಿಯನ್ನು ಜಿಲ್ಲಾ ಹಂತಕ್ಕೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಲ್ಲಿಸುವುದು.

ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ರವರು ಕಾರ್ಯಕ್ರಮದ ಬಗ್ಗೆ ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಶಾಲಾ ಶಿಕ್ಷಕರಿಗೆ ಮಾಹಿತಿಯನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು ಹಾಗೂ ಅನುಷ್ಠಾನಗೊಳಿಸಿದ ಬಗ್ಗೆ ಭಾಗವಹಿಸಿದ ಶಾಲೆ, ವಿದ್ಯಾರ್ಥಿ, ಶಿಕ್ಷಕರ ಸಂಖ್ಯೆ, ಹಾಗೂ ಫೋಟೋಗಳು, ವೀಡಿಯೊಗಳನ್ನು ಸಂಗ್ರಹಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ Google ಟ್ರ್ಯಾಕರ್‌ನಲ್ಲಿ ಅಪ್‌ಲೋಡ್ ಮಾಡುವುದು.(ಹೆಚ್ಚಿನ ಮಾಹಿತಿಗಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ, ನವದೆಹಲಿರವರ ಪತ್ರವನ್ನು ಲಗತ್ತಿಸಿದೆ.)

ಬ.ಬ.ರಿ/ಎ೦

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಉಪ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳು – ರವರಿಗೆ
2. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಶಾಲಾ ಮುಖ್ಯ ಶಿಕ್ಷಕರಿಗೆ

ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ & ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು-01
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು - 01.
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧಾರವಾಡ ಹಾಗೂ ಕಲ್ಬುರ್ಗಿ ವಿಭಾಗ
4. ನಿರ್ದೇಶಕರು(ಪ್ರಾಥಮಿಕಶಿಕ್ಷಣ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,. ಬೆಂಗಳೂರು - 01.
5. ನಿರ್ದೇಶಕರು (ಪ್ರೌಢಶಿಕ್ಷಣ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು – 01
6. ಕಛೇರಿ ಪ್ರತಿ